# ಸಂಗೀತದಲ್ಲಿ ಅಕ್ಷರರಮ್ಯತೆ



**ರಾಳಪಲ್ಲಿ ಅನಂತ ಕೃಷ್ಣಶರ್ಮಾ**

ಸಂಗೀತಕ್ಕೂ ಸಾಹಿತ್ಯಕ್ಕೂ ಸ್ನೇಹ ಎಷ್ಟು ಹಳೆಯದೋ ಸ್ಪರ್ಧೆಯೂ ಅಷ್ಟೇ ಹಳೆಯದು. ಈ ಎರಡೂ ಮೊದಲಿನಿಂದಲೂ ಒಂದಕ್ಕೊಂದು ಸಹಾಯಕವಾಗಿಯೇ ಸಂಸಾರ ಮಾಡುತ್ತಿದ್ದರೂ, ಒಂದನ್ನು ಮತ್ತೊಂದು ತುಳಿದುಹಾಕಬೇಕೆಂಬ ಪೋಟಾಪೋಟಿಯನ್ನು ಯಾವಾಗಲೂ ಪೂರ್ತಿಯಾಗಿ ಮರೆತ ಹಾಗಿಲ್ಲ. ಇದರ ಫಲವಾಗಿ ಎರಡೂ ಬಹಳವಾಗಿ ಬೆಳೆದು, ಬಲಿತು, ಸ್ವಾತಂತ್ರ್ಯಕ್ಕಾಗಿ ಪ್ರಬಲವಾದ ಪ್ರಣಯಕಲಹವನ್ನು ಮಾಡಿವೆ. ಪರಿಣಾಮವೇನೆಂದರೆ, ಎರಡೂ ಪ್ರಾಯಬಂದ ಅಣ್ಣ ತಮ್ಮಂದಿರಂತೆ ಆಸ್ತಿಯನ್ನು ಹಂಚಿಕೊಂಡು ಬೇರೆ ಬೇರೆ ಸಂಸಾರ ಮಾಡುತ್ತಿವೆ. ಆಗಾಗ ಯಥೋಚಿತವಾಗಿ ಪರಸ್ಪರ ಉಪಕಾರ ಮಾಡಬಹುದು; ಕಲೆತು ಸುಖಪಡಬಹುದು. ಅಷ್ಟೇ ಹೊರತು ಅದರ ಮನೆ ಬೇರೆ, ಇದರ ಮನೆ ಬೇರೆ. ಸಾಹಿತ್ಯವಿಲ್ಲದ ಸಂಗೀತವೇ, ಸಂಗೀತವಿಲ್ಲದ ಸಾಹಿತ್ಯವೇ ಈಗ ನಮಗೆ ಹೆಚ್ಚಾಗಿ ಸಿಗುವುದು. ಕಾವ್ಯಗಳನ್ನು ಓದುವಾಗ ಅಪಸ್ವರ ಸುಸ್ವರಗಳ ಚಿಂತೆಯಾಗಲಿ, ಹಾಡು ಹೇಳುವಾಗ ಸುಶಬ್ದಾಪಶಬ್ದಗಳ ವಿವಕ್ಷೆಯಾಗಲಿ, ಅಷ್ಟಾಗಿ ಬೇಕಿಲ್ಲವೆಂದು ನಾವೀಗ ಕಲಿತುಕೊಳ್ಳುತ್ತಿದ್ದೇವೆ.

ಆದರೆ, ಈ ಎರಡೂ ಹುಟ್ಟಿದಂದಿನಿಂದ ಕೂಡಿ ಬೆಳೆದವು. ಆದ್ದರಿಂದ ಪೂರ್ತಿಯಾಗಿ ಸೌಭ್ರಾತ್ರವನ್ನು ಹರಿದುಕೊಳ್ಳಲಾರವು. ಅದರಲ್ಲೂ ಸಾಹಿತ್ಯವನ್ನು ಸಮೂಲವಾಗಿ ಬಿಟ್ಟು ಸಂಗೀತ ಬಾಳುವುದು ಕಷ್ಟ. ಏಕೆಂದರೆ ನಾವೆಲ್ಲರೂ ಚಿಕ್ಕಂದಿನಿಂದಲೂ ಭಾಷೆಯನ್ನು ಮೆಟ್ಟಿಲು ಮೆಟ್ಟಿಲಾಗಿ ಕಲಿತುಕೊಳ್ಳುತ್ತಿದ್ದೇವೆ. ಆದ್ದರಿಂದ ಸಂಸ್ಕೃತವು ನಮ್ಮನ್ನು ಸ್ವತಂತ್ರವಾಗಿ ಸಹಜವಾಗಿ ಆಕರ್ಷಿಸಬಲ್ಲದು. ಆದರೆ ನಾದವಿದ್ಯೆಯನ್ನೂ ಹಾಗೆ ಕಲಿಸುವ ಪದ್ಧತಿ ನಮ್ಮಲ್ಲಿಲ್ಲ. ಆದ್ದರಿಂದ ಅದರ ರುಚಿಯೂ ರಹಸ್ಯವೂ ಕಿವಿಯ ಮಟ್ಟವನ್ನೂ ದಾಟಿ ಮನೋಬುದ್ಧಿಗಳವರೆಗೆ ಇಳಿಯಬೇಕೆಂದರೆ ಯಾರೋ ಕೆಲವರಿಗೆ ಹೊರತು ಎಲ್ಲರಿಗೂ ಸಾಧ್ಯವಲ್ಲ. ಇದರಿಂದಲೇ ಭಾಷೆಯ ಸಾಹಾಯ್ಯವಿಲ್ಲದ ನಾದಲಯಕಳಾರಚನೆಗಳನ್ನು- ಎಂದರೆ ರಾಗ, ತಾನ, ವರ್ಣ, ತಿಲ್ಲಾನಾ, ಸ್ವರಜತಿ ಮುಂತಾದವುಗಳನ್ನು- ನಮ್ಮಲ್ಲಿ ಸಂಸ್ಕೃತರಾದ ದೊಡ್ಡವರೇ ಅರ್ಥಮಾಡಿಕೊಂಡು ಅನುಭವಿಸಲಾರದೆ ಇದ್ದಾರೆ. ಭಾಷೆಯ ದೃಷ್ಟಿಯಿಂದಲೇ ಸಂಗೀತವನ್ನು ವಿಮರ್ಶಿಸುವ ಅಂತಸ್ತನ್ನು ದಾಟಿದವರು ನಮ್ಮ ದೇಶದಲ್ಲಿ ಹೆಚ್ಚು ಮಂದಿ ಇಲ್ಲ. ಆದ್ದರಿಂದ ಸಾಹಿತ್ಯದ ಯಜಮಾನಿಕೆ ಸಂಗೀತಸಂಸಾರದಲ್ಲಿ ಇನ್ನೂ ಸಲ್ಲುತ್ತಲೇ ಇದೆ.

ಯಾಜಮಾನ್ಯವನ್ನು ಕೊಟ್ಟರೆ ಸಾಕು, ಯಜಮಾನನ ಇಷ್ಟ ಅನಿಷ್ಟಗಳನ್ನೆಲ್ಲಾ ನಾವೂ ತಲೆಯ ಮೇಲೆ ಹಾಕಿಕೊಳ್ಳಬೇಕಾಗುವುದು. ಸಂಗೀತವು ಭಾಷೆಯ ಸಹಾಯವನ್ನು ಕೋರಿದ ಒಡನೆಯೇ ವ್ಯಾಕರಣ, ಯತಿ, ಪ್ರಾಸ, ಗುಣ, ದೋಷ ಮುಂತಾದ ಸಾಹಿತ್ಯದ ನಿಯಮಗಳೆಲ್ಲಾ ಸಂಗೀತ ರಚನೆಯಲ್ಲೂ ಬಂದು